

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಅದೃಷ್ಟ' ಕಾಣದ ಶಕ್ತಿಯ ಕೈವಾಡವೇ?....

ಬಹಳ ವರ್ಷಗಳ ಹಿಂದೆ ಪಾರ್ಲಿಮೆಂಟಿನಲ್ಲಿ ಪ್ರಾಸಂಗಿಕವಾಗಿ ಬಿಸಿ ಬಿಸಿಯಾದ ಒಂದು ಚರ್ಚೆ ನಡೆಯಿತು. ಚರ್ಚೆಯ ವಿಷಯ: "ದೇವರು ಇದ್ದಾನೆಯೇ ಇಲ್ಲವೇ?" ದೀರ್ಘ ಕಾಲದ ಚರ್ಚೆಯ ನಂತರವೂ ಲೋಕಸಭಾ ಸದಸ್ಯರಲ್ಲಿ ಒಮ್ಮತ ಮೂಡಲಿಲ್ಲ. ಸ್ಪೀಕರ್ ಓಟಿಗೆ ಹಾಕಿದರು. ಸುದೈವದಿಂದ ಆ ದಿನ ದೇವರ ಅದೃಷ್ಟ ಚೆನ್ನಾಗಿತ್ತು. ಕೇವಲ 0.5% ಅಂತರದಲ್ಲಿ ಬಡಪಾಯಿ ದೇವರು ನಾಸ್ತಿಕರಿಂದ ಬಚಾವಾದ! ಆಶ್ಚರ್ಯದ ಸಂಗತಿಯೆಂದರೆ ಚುನಾವಣೆಯ ಸಂದರ್ಭದಲ್ಲಿ ನೂರಕ್ಕೆ 99 ರಷ್ಟು ಸದಸ್ಯರು ಪಾರ್ಟಿ ಟಿಕೆಟ್ಟಿನಿಂದ ಹಿಡಿದು ನಾಮಿನೇಷನ್ ಫೈಲ್ ಮಾಡುವವರೆಗೂ ತಿರುಪತಿ ತಿಮ್ಮಪ್ಪನಿಂದ ಹಿಡಿದು ಪ್ರಚಲಿತವಿರುವ ಎಲ್ಲ ದೇವರುಗಳಿಗೂ ಹೋಮ-ಹವನ ಮಾಡಿ ದಿಂಡುರುಳು ಬಿದ್ದು ಆಶೀರ್ವಾದ ಪಡೆದವರು. ಹೀಗಿದ್ದೂ ಅವರನ್ನು ನಂಬಿ ಆಶೀರ್ವದಿಸಿದ ದೇವರ ಅಸ್ತಿತ್ವದ ಪ್ರಶ್ನೆ ಬಂದಾಗ ಪ್ರಚಂಡ ಬಹುಮತ ಏಕೆ ಬೀಳಲಿಲ್ಲ? ದೇವರ ಗತಿಯೇ ಹೀಗಾದಾಗ ಇಂತಹ ಪ್ರಚಂಡರನ್ನು ನಂಬಿ ಓಟು ಕೊಟ್ಟು ಗೆಲ್ಲಿಸುವ ಸಾಮಾನ್ಯ ಜನರ ಪಾಡೇನು!

ಇದೇ ಪ್ರಶ್ನೆಯನ್ನು ಅಕ್ಬರ್ ತನ್ನ ಆಸ್ಥಾನದ ಪಂಡಿತರಿಗೆ ಹಾಕಿ ದೇವರು ಇದ್ದರೆ ತೋರಿಸಿ ಎಂದು ಸವಾಲು ಹಾಕಿದ್ದನಂತೆ. 'ತಿಲಕಾಷ್ಟಮಹಿಷಬಂಧನ'ದ ಅಳಲೆಕಾಯಿ ಪಂಡಿತರು ಸಫಲರಾಗಲಿಲ್ಲ. ಆಗ ಚಾಣಾಕ್ಷಮತಿಯಾದ ಬೀರ್‌ಬಲ್ ತಾನು ದೇವರನ್ನು ತೋರಿಸುವುದಾಗಿ ಅಕ್ಬರನ ಸವಾಲನ್ನು ಸ್ವೀಕರಿಸಿದನು. ಅದು ಹೇಗೆ ಸಾಧ್ಯವೆಂದು ಆಸ್ಥಾನ ಪಂಡಿತರು ಹುಬ್ಬುಗಂಟಿಕ್ಕಿದರು. ಬೀರ್‌ಬಲ್ ಒಂದು ಹರಿದ ಗೋಣೀ ಚೀಲ ತಂದು ಅಕ್ಬರ್ ಮುಂದೆ ಹಿಡಿದು 'ಹುಜೂರ್, ಆಪ್ ಗೌರ್ ಸೇ ದೇಖಿಯೇ, ಇಸ್‌ಮೇಂ ಅಲ್ಲಾಹ್ ಛಿಪಾ ಹುವಾ ಹೈ' ಎಂದು ಹೇಳಿದನಂತೆ (ಹುಜೂರ್, ಇದನ್ನು ದಿಟ್ಟಿಸಿ ನೋಡಿ. ಇದರಲ್ಲಿ ಅಲ್ಲಾನು ಅಡಗಿದ್ದಾನೆ). ಅಕ್ಬರ್ ಕುತೂಹಲದಿಂದ ನೋಡಿದ, ದೇವರು ಕಾಣಿಸಲಿಲ್ಲ. ಎಲ್ಲಿ ಕಾಣಿಸುತ್ತಿಲ್ಲವಲ್ಲ ಎಂದು ಕೇಳಿದಾಗ ಬೀರಬಲ್ ಮತ್ತೊಮ್ಮೆ ಸರಿಯಾಗಿ ನೋಡಲು ಹೇಳಿ 'ಹುಜೂರ್, ಏಕ್ ಬಾತ್ ಬೋಲನಾ ಮೈಂ ಭೂಲ್‌ಗಯಾ, ಜೋ ಸಹೀ ಮೇಂ ಅಪನೇ ಬಾಪ್ ಕಾ ಲಡಕಾ ಹೈ ಉಸೀ ಕೋ ಅಲ್ಲಾಹ್ ಇಸ್ ಮೇಂ ದಿಖಾಯೀ ದೇಗಾ' (ಹೂಜೂರ್, ಒಂದು ಮಾತು ಹೇಳುವುದನ್ನು ನಾನು ಮರೆತೆ, ಯಾರು ನಿಜವಾಗಿಯೂ ಅವರ ಅಪ್ಪನಿಗೆ ಹುಟ್ಟಿದ ಮಗನೋ ಅವನಿಗೆ ಮಾತ್ರ ದೇವರು ಇದರಲ್ಲಿ ಕಾಣಿಸುತ್ತಾನೆ) ಎಂದಾಗ ಅಕ್ಬರ್ ಮರುಮಾತನಾಡದೆ ತಲೆಯಲ್ಲಾಡಿಸಿ 'ಓಹೋ, ಎಷ್ಟು ಚೆನ್ನಾಗಿ ಅಲ್ಲಾ ಇದರಲ್ಲಿ ಕಾಣಿಸುತ್ತಿದ್ದಾನಲ್ಲಾ' ಎಂದು ಆನಂದತುಂದಿಲನಾಗಿ ಕೈಮುಗಿದನಂತೆ! ಚಕ್ರವರ್ತಿಯನ್ನೂ ಬೇಸ್ತುಬೀಳುವಂತೆ ಮಾಡಬಲ್ಲ ಮೇಧಾಶಕ್ತಿ ಇದ್ದವನು ಬೀರ್‌ಬಲ್. ಅಂತಹ ಬೀರ್‌ಬಲ್‌ಗಿಂತಲೂ ಹೆಚ್ಚಿನ ಮೇಧಾವಿಗಳು, ದೇವರನ್ನೇ ಬೆಚ್ಚಿಬೀಳುವಂತೆ ಮಾಡಬಲ್ಲ ಅಸಾಧಾರಣ ಶಕ್ತಿಯುಳ್ಳವರು, ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳಬಲ್ಲ 'ಬಿಯರ್'ಬಲ್ಲರು ನಮ್ಮ ರಾಜಕೀಯ ಧುರೀಣರು! ಇಂಥವರು ಎಲ್ಲ ಪಕ್ಷಗಳಲ್ಲಿಯೂ ಇದ್ದಾರೆ. ಅವರು ಕೊಡುವ ಬೀರು ಬಾಟಲಿಗಳಿಗೆ ಮನಸೋತು ಜನರು ಓಟುಮಾಡಿದರೆ ಆ ದೇವರಿಗಾದ ಗತಿಯೇ ಜನರಿಗೂ ಆಗುವುದು!

ಅದಿರಲಿ. ನಾವಿಲ್ಲಿ ವಿಚಾರಮಾಡಲು ಹೊರಟಿರುವುದು ದೇವರ ಅಸ್ತಿತ್ವವನ್ನಾಗಲೀ, ರಾಜಕೀಯ ಭ್ರಷ್ಟಾಚಾರವನ್ನಾಗಲೀ, ಚಾಣಾಕ್ಷತನವನ್ನಾಗಲೀ ಅಲ್ಲ. 'ಆ ದಿನ ದೇವರ ಅದೃಷ್ಟ ಚೆನ್ನಾಗಿತ್ತು' ಎಂದು ಮೇಲೆ ಹೇಳಿದ ವಿನೋದದ ಮಾತಿನಲ್ಲಾಗಲೀ ಅಥವಾ ದೈನಂದಿನ ವ್ಯವಹಾರದಲ್ಲಿ 'ಅವನ ಅದೃಷ್ಟ ಚೆನ್ನಾಗಿತ್ತು' ಎಂದು ಹೇಳುವ ಮಾತಿನಲ್ಲಾಗಲೀ ಇರುವ 'ಅದೃಷ್ಟ' ಎಂಬ ಶಬ್ದದ ಅರ್ಥ ಏನು? ಅದು ದೇವರಿಗಿಂತ ಭಿನ್ನವಾದ ಶಕ್ತಿಯೇ ಅಥವಾ ಒಂದೇನೇ? 'ಅದೃಷ್ಟ' ಮತ್ತು 'ಹಣೆಬರಹ' ಎಂಬ ಶಬ್ದಗಳು ಹೆಚ್ಚುಕಡಿಮೆ ಸಮಾನಾರ್ಥಕ ಪದಗಳಾದರೂ ಅವುಗಳನ್ನು ವಿಭಿನ್ನ ಸಂದರ್ಭಗಳಲ್ಲಿ ಬಳಸುವುದನ್ನು ನೋಡಬಹುದು. ಮಾತಿನ ಪ್ರಸಂಗದಲ್ಲಿ 'ಇವನಿಗೆ ಲಕ್ (luck) ಹೊಡೆಯಿತು' ಅಥವಾ 'ಅವನಿಗೆ ಲಕ್ವಾ (paralysis) ಹೊಡೆಯಿತು' ಎನ್ನುವುದನ್ನು ನೀವು ಕೇಳಿದ್ದೀರಿ. ಲಾಟರಿಯಲ್ಲಿ ಗೆದ್ದು ಲಕ್ಷಾಂತರ ರೂಪಾಯಿ ಪಡೆದು ಧನಿಕನಾಗುವುದಾಗಲೀ, ದಿಢೀರನೆ ಕೈಕಾಲು ಹತೋಟಿ ತಪ್ಪಿ ನಡೆಯದಂತೆ ನಿಷ್ಕ್ರಿಯನಾಗುವುದಾಗಲೀ ಎರಡೂ ಅನಿರೀಕ್ಷಿತ ಘಟನೆಗಳು. ಆದರೆ ಮೊದಲನೆಯ ಘಟನೆಯನ್ನು ಕುರಿತು 'ಅದೃಷ್ಟ' ಎನ್ನುತ್ತೀರಿ; ಎರಡನೆಯ ಘಟನೆಯನ್ನು ಕುರಿತು 'ಹಣೆಬರಹ' ಅಥವಾ 'ದುರದೃಷ್ಟ' ಎನ್ನುತ್ತೀರಿ. ಒಂದು good luck ಮತ್ತೊಂದು bad luck. ಒಂದು ಸಂತೋಷದ ಘಟನೆ ಮತ್ತೊಂದು ದುಃಖಕರ ಘಟನೆ. ಒಟ್ಟಾರೆ 'ಅದೃಷ್ಟ' ಎಂದರೇನು? ಕೆಲವು ಘಟನೆಗಳನ್ನು ಪರಿಶೀಲಿಸೋಣ:

ಒಂದು ಸಂಜೆ ಶಿಷ್ಯರೊಬ್ಬರು ನಮ್ಮನ್ನು ಕಾಣಲು ಮೋಟಾರ್ ಬೈಕಿನಲ್ಲಿ ದಾವಣಗೆರೆಯಿಂದ ಸಿರಿಗೆರೆಗೆ ಬಂದಿದ್ದರು. ವಾಪಾಸ್ ಹೊರಡುವ ಹೊತ್ತಿಗೆ ಕತ್ತಲಾಗಿತ್ತು. ರಾತ್ರಿಹೊತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಮೋಟಾರ್ ಬೈಕಿನಲ್ಲಿ ಹೋಗುವುದು ಅಪಾಯ, ಮಠದಲ್ಲಿ ಉಳಿದುಕೊಂಡು ಬೆಳಿಗ್ಗೆ ಹೋಗಿ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಅರ್ಜೆಂಟ್ ಹೋಗಬೇಕಾಗಿದೆಯೆಂದು ಹಟ ಮಾಡಿದರು. ಮಠದ ವಾಹನದಲ್ಲಿ ಭರಮಸಾಗರದವರೆಗೆ ಹೋಗಿರಿ ಅಲ್ಲಿಂದ ಮುಂದಕ್ಕೆ ಯಾವುದಾದರೂ ಬಸ್ಸಿನಲ್ಲಿ ಹೋಗಿರಿ, ಲಾರಿ ಹತ್ತಬೇಡಿ ಎಂದು ಕಟ್ಟಪ್ಪಣೆ ಮಾಡಿಕಳುಹಿಸಿದೆವು. ಆ ಶಿಷ್ಯರು ಭರಮಸಾಗರದಲ್ಲಿ ಇಳಿಯುತ್ತಿದ್ದಂತೆಯೇ ಬಸ್ಸಿಗಿಂತ ಮುಂಚಿತವಾಗಿ ಬಂದ ಲಾರಿಯೊಂದನ್ನು ಹತ್ತಿ

ಕುಳಿತರು. ನಮ್ಮ ನೆನಪಾಗಿ ಗುರುಗಳ ಮಾತನ್ನು ಉಲ್ಲಂಘಿಸಿದಂತಾಗುತ್ತದೆಯೆಂದು ಹಿಂಜರಿದು ಹತ್ತಿ ಕುಳಿತವರು ಮತ್ತೆ ಇಳಿದರು. ಅವರನ್ನು ಇಳಿಸಿ ಹೊರಟ ಲಾರಿ ಸ್ವಲ್ಪಹೊತ್ತಿನಲ್ಲಿಯೇ ಮರಕ್ಕೆ ಡಿಕ್ಕಿ ಹೊಡೆದು ಅದರಲ್ಲಿದ್ದವರು ಕೈಕಾಲು ಮುರಿದುಕೊಂಡರು!

ಒಬ್ಬ ಹುಡುಗ ಮನೆಯಿಂದ ಸೈಕಲ್ ಮೇಲೆ ಹೊರಟ. ಹೊರಟ ಸ್ವಲ್ಪ ಹೊತ್ತಿನಲ್ಲಿಯೇ ಆಕಾಶದಲ್ಲಿ ಒಂದು ಹದ್ದು ಹಾರಾಡುತ್ತಿತ್ತು. ಅದರ ಕಾಲಲ್ಲಿ ಒಂದು ಅರೆಜೀವವಾದ ನಾಗರಹಾವು ಇತ್ತು. ಅದು ಒದ್ದಾಡುತ್ತಾ ಹೇಗೋ ಬಿಡಿಸಿಕೊಂಡು ಕೆಳಗೆ ಸೀದಾ ಸೈಕಲ್ ಸವಾರನ ತಲೆಯ ಮೇಲೆ ಬಿತ್ತು. ಹಾವು ಕಚ್ಚಿ ಸೈಕಲ್ ಸವಾರ ಸತ್ತು ಹೋದ. ನೋಡಿದವರು ಅಯ್ಯೋ ಪಾಪ ಆ ಹುಡುಗ ಮನೆಯಿಂದ ಐದು ನಿಮಿಷ ಮುಂಚಿತವಾಗಿ ಅಥವಾ ತಡವಾಗಿ ಹೊರಟಿದ್ದರೆ ಹಾವು ಆತನ ತಲೆಯ ಮೇಲೆ ಬೀಳುತ್ತಿರಲಿಲ್ಲ. ಅವನ ಹಿಂದೆ/ಮುಂದೆ ಬೀಳುತ್ತಿತ್ತು. ಯಾವ ಅಪಾಯವೂ ಸಂಭವಿಸುತ್ತಿರಲಿಲ್ಲ. ಹಾವು ಬೀಳುವ ಹೊತ್ತಿಗೆ ಸರಿಯಾಗಿ ಆ ಹುಡುಗ ಅದೇ ಜಾಗಕ್ಕೆ ಬರಬೇಕಿತ್ತೆ? ಛೆ, ಅವನ ಹಣೆಬರಹ ಏನು ಮಾಡಲು ಸಾಧ್ಯ? ಎಂದು ಅನುಕಂಪೆಯ ಮಾತುಗಳನ್ನಾಡಿದರು.

ಇನ್ನೊಂದು ಘಟನೆ. ಹಿರಿಯ ವ್ಯಕ್ತಿಯೊಬ್ಬರು ಬೆಂಗಳೂರಿಗೆ ಹೊರಟಿದ್ದರು. ಮಾರ್ಗಮಧ್ಯೆ ಮಧ್ಯಾಹ್ನದ ಊಟಕ್ಕೆಂದು ಬಸ್ಸು ನಿಂತಿತು. ಆ ವ್ಯಕ್ತಿ ಚಡಪಡಿಸುತ್ತಿದ್ದರು. ಅವರಿಗೆ ತುರ್ತಾಗಿ ಬೆಂಗಳೂರಿಗೆ ಹೋಗಬೇಕಾಗಿತ್ತು. ಬಸ್ಸಿನಿಂದ ಇಣುಕಿ ನೋಡಿದರು. ಹತ್ತಿರದಲ್ಲಿಯೇ ಒಂದು ಪೇಪರ್ ವ್ಯಾನ್ ನಿಂತಿತ್ತು. ಅದರಲ್ಲಿ ಹೋದರೆ ಬೆಂಗಳೂರನ್ನು ಬೇಗನೆ ತಲುಪಬಹುದೆಂದು ಆಲೋಚಿಸಿ ಆ ವ್ಯಕ್ತಿ ಬಸ್ಸಿನಿಂದ ಇಳಿದು ಪೇಪರ್‌ವ್ಯಾನಿಗೆ ಹೋದರು. ಆಶ್ಚರ್ಯದ ಸಂಗತಿಯೆಂದರೆ ಅದರಲ್ಲಿ ಅವರ ಅಳಿಯ ಪ್ರಯಾಣ ಮಾಡುತ್ತಿದ್ದ. ಮಾವ ಬಂದುದನ್ನು ನೋಡಿ ಆತ ತನ್ನ ಸೀಟನ್ನು ಅವರಿಗೆ ಬಿಟ್ಟುಕೊಟ್ಟು ಮಾವನ ಟಿಕೆಟ್ಟನ್ನು ಪಡೆದು ಬಸ್ಸಿಗೆ ಹೋದ. ಅಳಿಯನ ಸದ್ವರ್ತನೆಯನ್ನು ಕಂಡು ಮಾವನಿಗೆ ಸಂತೋಷವಾಯಿತು. ಆದರೆ ಪೇಪರ್‌ವ್ಯಾನ್ ಹೊರಟ ಹತ್ತೇ ನಿಮಿಷಗಳಲ್ಲಿ ಮರಕ್ಕೆ ಡಿಕ್ಕಿಹೊಡೆದು ಆ ಮಾವ ಸತ್ತು ಹೋದ! ಈ ದುರ್ಘಟನೆಯನ್ನು ಹೇಗೆ ವಿಶ್ಲೇಷಣೆ ಮಾಡುತ್ತೀರಿ? ಬಸ್ಸಿನಲ್ಲಿಯೇ ಪ್ರಯಾಣ ಮುಂದುವರಿಸಿದ್ದರೆ ಮಾವ ಸಾಯುತ್ತಿರಲಿಲ್ಲ; ಅಳಿಯ ಸಾಯುತ್ತಿದ್ದ ಎನ್ನುತ್ತೀರಾ? ಅಷ್ಟೊಂದು ಖಚಿತವಾಗಿ ಹೇಗೆ ಹೇಳಲು ಸಾಧ್ಯ? ಅಳಿಯ ಪೇಪರ್‌ವ್ಯಾನಿನಲ್ಲಿ ಪ್ರಯಾಣಿಸಿದ್ದರೆ ಅಪಘಾತ ಸಂಭವಿಸುತ್ತಿತ್ತೆಂದು ಏನು ಖಾತ್ರಿ?

ಇಂತಹ ಸಂದರ್ಭಗಳಲ್ಲಿ ಬರುವ ಉದ್ಗಾರವೇ ಅವರವರ ಅದೃಷ್ಟ ಅಥವಾ ಹಣೆಯ ಬರಹ! 'ಅದೃಷ್ಟ' ಎಂದರೆ ಕಣ್ಣಿಗೆ ಕಾಣದ್ದು ಎಂದರ್ಥ. ಒಂದು ಘಟನೆ ಅಥವಾ ದುರ್ಘಟನೆ ಹೇಗೆ ಆಯಿತೆಂದು ವಿವರಣೆ ನೀಡಬಹುದೇ ಹೊರತು ಏಕೆ ಹೀಗೆ ಆಯಿತೆಂದು ನಿರ್ದುಷ್ಟವಾದ ಕಾರಣ ಕೊಡುವುದು ಕಷ್ಟ. ಮಾವ ಬಂದು ಕುಳಿತುಕೊಂಡಿದ್ದಕ್ಕೂ ವ್ಯಾನ್ ಅಪಘಾತಕ್ಕೆ ಒಳಗಾಗಿದ್ದಕ್ಕೂ ಯಾವ ಸಂಬಂಧವೂ ಇಲ್ಲ. ಒಂದಾದ ನಂತರ ನಡೆಯುವ ಎರಡು ಘಟನೆಗಳ ಮಧ್ಯೆ ಎಲ್ಲ ಸಂದರ್ಭಗಳಲ್ಲೂ ಕಾರ್ಯ-ಕಾರಣ ಸಂಬಂಧ ಇದ್ದೇ ಇರುತ್ತದೆಂದು ಹೇಳಲು ಬರುವುದಿಲ್ಲ. ಚಾಲಕನ ನಿರ್ಲಕ್ಷ್ಯತನದಿಂದಾಗಿ ವ್ಯಾನ್ ಡಿಕ್ಕಿ ಹೊಡೆದು ಮಾವ ಸತ್ತನೆಂಬುದು ನಿಜ. ಆದರೆ ಅಂತಹ ಸಾವಿನತ್ತ ಮಾವ ಹೆಜ್ಜೆ ಹಾಕಲು ಕಾರಣವೇನು? ಮನುಷ್ಯನ ತಾರ್ಕಿಕ ಬುದ್ಧಿ ಇಲ್ಲಿ ಸೋಲುತ್ತದೆ. ಹೀಗಾಗಿ 'ಕಾಣದ ಶಕ್ತಿ' ಯೊಂದರ ಕೈವಾಡವಿದೆಂದು ಆಸ್ತಿಕರು ನಂಬಿ ದೇವರ ಶರಣುಹೋಗುತ್ತಾರೆ.

**ಲಲಾಟಲಿಖಿತ ಬರೆದ ಬಳಿಕ**
**ಪಲ್ಲಟವ ಮಾಡಬಾರದು...**

**ಅಂಜಿದಡಾಗದು, ಅಳುಕಿದಡಾಗದು,**
**ವಜ್ರ-ಪಂಜರದೊಳಗಿದ್ದಡಾಗದು, ತಪ್ಪದುವೋ ಲಲಾಟಲಿಖಿತ!....**

**ನಮ್ಮ ಕೂಡಲಸಂಗಮ ದೇವರು ಬರೆದ ಬರೆಹವ ತಪ್ಪಿಸುವಡೆ**
**ಹರಿಬ್ರಹ್ಮಾದಿಗಳಿಗಳವಲ್ಲ!**

ಎನ್ನುತ್ತಾರೆ ಬಸವಣ್ಣನವರು. ಆಧುನಿಕ ವಿಚಾರವಾದಿಗಳು 'ಇದೊಂದು ಆಕಸ್ಮಿಕ ಘಟನೆ' ಎಂದಷ್ಟೇ ಹೇಳಿ ಕೈಚೆಲ್ಲುತ್ತಾರೆ. ಆದರೆ 'ಆಕಸ್ಮಿಕ' ಎನ್ನುವುದು 'ಹೇಗೆ' ಎಂಬುದಕ್ಕೆ ಉತ್ತರವಾಗಬಲ್ಲುದೇ ಹೊರತು 'ಏಕೆ' ಎಂಬುದಕ್ಕೆ ಉತ್ತರವಾಗಲಾರದು. ಮನುಷ್ಯನ ಬುದ್ಧಿಶಕ್ತಿ, ತರ್ಕಗಳಿಗೆ ನಿಲುಕದ, ಅವನ ಯಾವ ಪ್ರಯತ್ನವೂ ಇಲ್ಲದೆ ನಡೆಯುವ ವಿಸ್ಮಯಕಾರಿ ಘಟನೆಯೇ ಅದೃಷ್ಟ. ಅಂತಹ ಘಟನೆ ಕಣ್ಣಿಗೆ ಗೋಚರಿಸಿದರೂ ಅದನ್ನು ನಿಯಂತ್ರಿಸಿದ ಕೈ ಮಾತ್ರ ಅಗೋಚರ!

ಕನ್ನಡದ ರಂಗಭೂಮಿಯಲ್ಲಿ ಮೂರಕ್ಷರಗಳ ಮುಕ್ಕಣ್ಣನಾಗಿದ್ದ ರಂಗಜಂಗಮ ಸಿ.ಜಿ.ಕೆ ಮೂರುವರ್ಷಗಳ ಹಿಂದೆ ಸಿರಿಗೆರೆಗೆ ಬಂದಿದ್ದರು. ಮಠಗಳ ಕಡುವಿರೋಧಿಯಾಗಿದ್ದರೂ ನಮ್ಮೊಡನೆ ಆತ್ಮೀಯ ಸಂಬಂಧವುಳ್ಳವರಾಗಿದ್ದ ಅವರು ನಮ್ಮ ಮಠದ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ಒಂದು ಸಾಕ್ಷ್ಯಚಿತ್ರವನ್ನು ಮಾಡುವ ಉದ್ದೇಶ ಹೊಂದಿದ್ದರು. ಅದಕ್ಕಾಗಿ ಅವರು ಪ್ರಖ್ಯಾತ ಲೇಖಕರು ಮತ್ತು ಚಿತ್ರನಿರ್ಮಾಪಕರೂ ಆದ ನಾಗತೀಹಳ್ಳಿ ಚಂದ್ರಶೇಖರ್ ಅವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದರು. ಅದುವರೆಗೆ ನಮ್ಮ ಅವರ ಸಂಭಾಷಣೆ 5-10 ನಿಮಿಷಗಳಿಗಿಂತ ಹೆಚ್ಚು ಎಂದೂ ಆಗಿರಲಿಲ್ಲ. ಆದರೆ ಆ ದಿನ ಮಾತ್ರ ಸಂಜೆ ಸತತವಾಗಿ ನಾಲ್ಕು ಗಂಟೆಗಳ ಕಾಲ ಮಾತನಾಡಿದರೂ ಅವರ ನಮ್ಮ ಮಾತು ಮುಗಿದಿರಲಿಲ್ಲ. ಕ್ರಿ.ಪೂ. 5ನೇ ಶತಮಾನದ ಮಹರ್ಷಿ ಪಾಣಿನಿಯ ವ್ಯಾಕರಣ ಸೂತ್ರಗಳನ್ನು ಆಧರಿಸಿ ಗಣಕಯಂತ್ರದಲ್ಲಿ ನಾವು ಸಿದ್ಧಪಡಿಸಿದ 'ಗಣಕಾಷ್ಟಾಧ್ಯಾಯೀ' ಎಂಬ ತಂತ್ರಾಂಶ (software) ಮತ್ತು ಬಸವಾದಿ ಶಿವಶರಣರ ವಚನಗಳನ್ನು ಕುರಿತು ಸಿದ್ಧಪಡಿಸಿದ ಮತ್ತೊಂದು ತಂತ್ರಾಂಶ 'ಗಣಕವಚನ ಸಂಪುಟ' ಇವುಗಳ ಪ್ರಾತ್ಯಕ್ಷಿಕೆಯನ್ನು ನಮ್ಮ ಪುಟ್ಟ ಕಂಪ್ಯೂಟರ್ (laptop) ನಲ್ಲಿ ನೋಡಿದಾಗಲಂತೂ ಅವರು ಮಂತ್ರಮುಗ್ಧರಾದರು. "ನನಗೆ ಇದೆಲ್ಲಾ ಗೊತ್ತಿರಲಿಲ್ಲ. ತಮ್ಮ ಈ ಸಾಧನೆಗೆ Hats off" ಎಂದು ಉದ್ಗರಿಸಿದರು. ಅದೇ ನಮ್ಮ ಅವರ ಕೊನೆಯ ಸಂಭಾಷಣೆ. ಎಂದಿನಂತೆ ಬೆಳಗಿನ ಜಾವ ವಾಯುವಿಹಾರಕ್ಕೆಂದು ಮಹಡಿಯ ಮೆಟ್ಟಲುಗಳನ್ನು ಇಳಿದು ಬರುತ್ತಿದ್ದಂತೆಯೇ ಕೆಳಗಿನ ಮಹಡಿಯಲ್ಲಿದ್ದ ಸಿ.ಜಿ.ಕೆ ಆತ್ಮ ಬಹುದೂರ ಸರಿದುಹೋಗಿತ್ತು!

ನಮ್ಮ ಮಠದ ಸಾಕ್ಷ್ಯಚಿತ್ರವನ್ನು ಸೆರೆಹಿಡಿಯಲು ಬಂದಿದ್ದ ಕ್ಯಾಮರಾ ನಾಗತೀಹಳ್ಳಿಯವರ ನಿರ್ದೇಶನವಿಲ್ಲದೆ ಸಿ.ಜಿ.ಕೆ ಯವರ ಅಂತಿಮ ದಿನಗಳ ಹೃದಯವಿದ್ರಾವಕ ದೃಶ್ಯಗಳನ್ನು ಸೆರೆಹಿಡಿದಿತ್ತು! ಆಗ ನಮಗೆ ನೆನಪಾಗಿದ್ದು ಸಂಸ್ಕೃತದ ಈ ಕೆಳಗಿನ ಸುಭಾಷಿತ:

**ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ**
**ಭಾಸ್ವಾನುದೇಷ್ಯತಿ, ಹಸಿಷ್ಯತಿ ಪಂಕಜಂ ಚ**
**ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ**
**ಹಾ ಹಂತ! ಹಂತ! ನಲಿನೀಂ ಗಜ ಉಜ್ಜಹಾರ!**

ಇದರ ಕನ್ನಡ ಭಾವಾನುವಾದ:

**ಉರುಳುವುದು ಇರುಳು, ಹರಿಯುವುದು ಬೆಳಗು**
**ಮತ್ತೆ ಮೂಡಿಬರುವನು ಮೂಡಣದಿ ರವಿಯು**
**ಮುಗುಳು ನಗೆ ಬೀರುತ್ತ ಅರಳುವುದು ತಾವರೆಯು**
**ತಕತಕನೆ ಕುಣಿದು ಕುಪ್ಪಳಿಸಿ ಮತ್ತೆ ಝೇಂಕರಿಸುತ್ತ**
**ಮುಂದೆ ಸಾಗುವೆನೆಂದು ದುಂಬಿ ಕನಸು ಕಾಣುತಿರಲು**

**ಏನಿದಯ್ಯೋ ದುರ್ವಿಧಿಯು**
**ಬಂತೊಂದು ಕಾಡಾನೆ ಎಲ್ಲಿಂದಲೋ**
**ಕಣ್ರೆಪ್ಪೆ ಬಡಿಯುವುದರೊಳಗೆ**
**ಕೊಳದ ಕೆಂದಾವರೆಯ ಕಿತ್ತು**
**ಕಚಕಚನೆ ತುಳಿದು ಘೀಳಿಟ್ಟಿತು!**

ಒಂದು ಸರೋವರ, ಆ ಸರೋವರದ ದಡದಲ್ಲಿ ಅರಳಿ ನಿಂತ ಕಮಲ. ಝೇಂಕರಿಸುತ್ತ ಬಂದ ಒಂದು ದುಂಬಿ. ಆ ಕಮಲದ ಹೂವಿನೊಳಗೆ ಕುಳಿತು ಮೈಮರೆತು ಮಕರಂದವನ್ನು ಆಸ್ವಾದಿಸುತ್ತಿತ್ತು. ಅಷ್ಟರಲ್ಲಿ ಸೂರ್ಯಾಸ್ತವಾಯಿತು. ಕಮಲದ ದಳಗಳು ಮುಚ್ಚಿಕೊಂಡವು; ದುಂಬಿ ಕಮಲದ ಕೋಶದಲ್ಲಿ ಬಂಧಿಯಾಯಿತು. ಹೊರಬರಲು ಆಗಲಿಲ್ಲ. ದುಂಬಿ ಚಿಂತಿಸತೊಡಗಿತು. "ರಾತ್ರಿ ಹೀಗೆ ಇರುವುದಿಲ್ಲ, ಬೆಳಗಾಗುತ್ತದೆ, ಸೂರ್ಯೋದಯವಾದಾಗ ಮತ್ತೆ ಕಮಲದ ಹೂವು ಅರಳುತ್ತದೆ, ನಾನು ಹೊರಗೆ ಬಂದು ಹಾರಿ ಮತ್ತೊಂದು ಹೂವಿನ ಮಕರಂದವನ್ನು ಹೀರುತ್ತೇನೆ." ಆದರೆ ವಿಧಿಯ ಸಂಚು ಬೇರೆಯೇ ಆಗಿತ್ತು. ಅದೆಲ್ಲಿತ್ತೋ ಏನೋ ಒಂದು ಕಾಡಾನೆ ಸರೋವರಕ್ಕೆ ನೀರು ಕುಡಿಯಲು ಬಂತು. ಕೊಳದ ದಂಡೆಯಲ್ಲಿದ್ದ ಆ ಕಮಲದ ಹೂವನ್ನು ಇಡೀ ಬಳ್ಳಿಯೊಂದಿಗೆ ಕಿತ್ತು ಕೆಳಗೆ ಅಪ್ಪಳಿಸಿ ಕಾಲಿನಿಂದ ಹೊಸಕಿ ಹಾಕಿತು. ಕಮಲದ ಹೂವಷ್ಟೇ ಮಣ್ಣಾಗಿ ಹೋಗಲಿಲ್ಲ, ಅದರೊಳಗಿದ್ದ ದುಂಬಿಯೂ ಸಹ. ದುಂಬಿಯು ಬೆಳಗಿನ ಹೊಂಗಿರಣಗಳನ್ನು ನೋಡಲೇ ಇಲ್ಲ. ಅದರ ಎಲ್ಲ ಕನಸುಗಳು ಭಗ್ನವಾಗಿ ಹೋಗಿದ್ದವು!

ಏಕೆ ಹೀಗಾಯಿತೆಂಬುದಕ್ಕೆ ಕಾರಣ ಹುಡುಕಲು ತನ್ನ ಮೂಲವನ್ನೇ ಅರಿಯಲಾಗದ ಬುದ್ಧಿಯಿಂದ ಸಾಧ್ಯವೇ? ದುಬಾರಿ ಬೆಲೆಯನ್ನು ತೆತ್ತು ಪಡೆಯುವ ಜಡವಸ್ತುವಾದ ಹರಳಿನ ಉಂಗುರದಿಂದಾಗಲೀ, ಅದೃಷ್ಟಸಂಖ್ಯೆಯ ಕಾರಿನ ನಂಬರ್‌ಪ್ಲೇಟಿನಿಂದಾಗಲೀ, ದೂರವಾಣಿ ಸಂಖ್ಯೆಯಿಂದಾಗಲೀ ಇಂತಹ ಅದೃಷ್ಟವನ್ನು ತಮಗೆ ಬೇಕಾದಂತೆ ನಿಯಂತ್ರಿಸಲು ಸಾಧ್ಯವೇ? ಅಷ್ಟೊಂದು ದುಬಾರಿ ಬೆಲೆ ತೆತ್ತು ಧರಿಸಿದ ನಿಮ್ಮ ಅದೃಷ್ಟದ ವಜ್ರದುಂಗುರ ಲೋಕಾಯುಕ್ತರ ಕೆಂಗಣ್ಣಿಗೆ ಬಿದ್ದು ನಿಮ್ಮ ದುರದೃಷ್ಟಕ್ಕೂ ಕಾರಣವಾಗಬಹುದಲ್ಲವೇ? "Men are not prisoners of Fate, but only prisoners of their own minds" (ಮನುಷ್ಯ ಹಣೆಬರಹದ ಸೆರೆಯಾಳಲ್ಲ, ತನ್ನ ಮನಸ್ಸಿನ ಸೆರೆಯಾಳು) ಎನ್ನುವ ಫ್ರಾಂಕ್ಲಿನ್ ರೂಸ್‌ವೆಲ್ಟನ ಮಾತನ್ನು ಮೆಲುಕುಹಾಕಿ ನಿರ್ಧರಿಸಿ.

**25.3.2009**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑